ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): (ಡಾ॥ ಎಂ.ಶಂಕರನಾಯಕ್, ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: *ವಿಧೇಯಕವನ್ನು ಮಂಡಿಸಲಾಗಿದೆ*.

7 ಪ್ರಕಟಣೆ

ವಿಷಯ: ಆಂಧ್ರಪ್ರದೇಶದ ನೆರೆಹಾವಳಿಗೆ ಸಿಕ್ಕಿ ತೊಂದರೆಗೊಳಗಾಗಿರುವ ಜನರಿಗೆ ಮಾನ್ಯ ಮಂತ್ರಿಗಳು, ಶಾಸಕರು ಒಂದು ತಿಂಗಳ ವೇತನವನ್ನು ನೀಡುವ ಬಗ್ಗೆ.

ಅಧ್ಯಕ್ಷರು: ಆಂಧ್ರಪ್ರದೇಶದಲ್ಲಿ ನೆರೆಹಾವಳಿಗೆ ಸಿಕ್ಕಿ ತೊಂದರೆಗೊಳಗಾಗಿರತಕ್ಕಂಥ ಜನರಿಗೆ ನೆರವು ನೀಡುವ ಸಲುವಾಗಿ 'ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಚಂಡಮಾರುತ ಪರಿಹಾರ ನಿಧಿ, ಆಂಧ್ರಪ್ರದೇಶ, ಇವರಿಗೆ ಒಂದು ತಿಂಗಳ ವೇತನವನ್ನು ಕೊಡತಕ್ಕಂಥ ವಿಚಾರವನ್ನು ಮಾಡಿದ್ದೇವೆಂದು ಶಾಸನ ಸಭಾ ಸದಸ್ಯರುಗಳಿಗೆ ವಿನಂತಿ ಮಾಡಿಕೊಳ್ಳಲಾಗಿತ್ತು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರು ಭಾರತೀಯ ಜನತಾ ಪಕ್ಷದ ನಾಯಕರು ಮತ್ತು ಆಡಳಿತ ಪಕ್ಷದ ನಾಯಕರು ಇವರೆಲ್ಲರಿಗೂ ಈ ವಿಷಯವನ್ನು ತಿಳಿಸಿದ್ದೆವು. ಅವರೆಲ್ಲರೂ ತಮ್ಮ ತಮ್ಮ ಸದಸ್ಯರುಗಳಿಗೆ ಸೂಚನೆ ಕೊಟ್ಟಿದ್ದಾರೆ. ಅದಕ್ಕೆ ಉತ್ತರವಾಗಿ ಈ ಕೆಳಕಂಡ ಶಾಸಕರುಗಳು ಹಾಗೂ ಮಂತ್ರಿಗಳು ತಮ್ಮ ಒಂದು ತಿಂಗಳ ಸಂಬಳವನ್ನು ಕೊಟ್ಟಿದ್ದಾರೆ ಅವರ ಹೆಸರುಗಳು ಈ ಕೆಳಕಂಡಂತೆ ಇದೆ.

1. ಶ್ರೀ ಎಂ.ವೈ. ಘೋರ್ಪಡೆ
2. ಶ್ರೀ ಜೆ.ಹೆಚ್. ಪಾಟೀಲ್
3. ಶ್ರೀ ಆರ್. ನಾರಾಯಣ್
4. ಶ್ರೀ ಎಸ್. ಶಿವಶಂಕರಪ್ಪ
5. ಶ್ರೀ ಎಂ. ವೀರಪ್ಪ ಮೊಯಿ
6. ಶ್ರೀ ಬಿ.ಎಸ್. ಯಡಿಯೂರಪ್ಪ
7. ಶ್ರೀ ಚಂದ್ರಶೇಖರ ಮಾಮನಿ
8. ಶ್ರೀ ಎಂ ವರದೇಗೌಡ
9. ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ
10. ಶ್ರೀ ಜಯಪ್ರಕಾಶ್ ಹೆಗ್ಡೆ

11. ಶ್ರೀ ಶ್ರೀಕಾಂತ್ ಅಂಬದಗಟ್ಟಿ

12. ಶ್ರೀ ಎನ್.ಡಿ. ಜಯರಾಂ

13. ಶ್ರೀ ರಾಮಲಿಂಗರೆಡ್ಡಿ

14. ಶ್ರೀ ಸಿ.ಎಂ. ಉದಾಸಿ

15. ಶ್ರೀ ಕೆ.ಎನ್. ನಾಗೇಗೌಡ

16. ಶ್ರೀ ಅಜಯಕುಮಾರ್ ಸರನಾಯಕ್

17. ಶ್ರೀ ಎಂ.ಪಿ. ಪ್ರಕಾಶ್

18. ಶ್ರೀ ಆರ್.ವಿ. ದೇಶಪಾಂಡೆ

19. ಶ್ರೀಮತಿ ವಿಮಲಾಬಾಯಿ ದೇಶಮುಖ

20. ಶ್ರೀಮತಿ ಟಿ.ಬಿ. ಲಲಿತಾನಾಯಕ್

21. ಶ್ರೀ ರಮೇಶ್ ಕುಮಾರ್.

ಇನ್ನು ಕೆಲವರ ಹಣ ಅಕೌಂಟ್ಸ್ ಸೆಕ್ಷನ್‌ಗೆ ಹೋಗಿದೆ. ಕೆಲವರು ನೇರವಾಗಿ ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಚಂಡಮಾರುತ ಪರಿಹಾರ ನಿಧಿಗೆ ತಮ್ಮ ಹಣವನ್ನು ಕಳುಹಿಸಿದ್ದಾರೆ. ದಯಮಾಡಿ ಆ ಹೆಸರುಗಳನ್ನೆಲ್ಲಾ ಕೊಟ್ಟರೆ ಅವುಗಳನ್ನು ಕೂಡ ಓದಿ ಹೇಳಿಬಿಡುತ್ತೇನೆ. ಹಣ ಕೊಟ್ಟಿದ್ದು ಅಂತಹವರ ಹೆಸರು ಅಚಾತುರ್ಯದಿಂದ ಬಿಟ್ಟುಹೋಗಿದ್ದರೆ ಅದನ್ನು ನಮ್ಮ ಕಚೇರಿಗೆ ವರ್ತಮಾನ ಕೊಟ್ಟರೆ ಪಟ್ಟಿ ಮಾಡಿ ಮುಂದಿನ ಸಲ ಓದುತ್ತೇನೆ. ಇವರೆಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಈಗ ಸದನವನ್ನು ಮುಂದೂಡಿ ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2-05 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಪುನಃ 3.20ಕ್ಕೆ ಸಮಾವೇಶಗೊಂಡಿತು

(ಶ್ರೀ ರಮೇಶ್ ಕುಮಾರ್) ರವರು ಅಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಮಾನ್ಯ ನಂಜೇಗೌಡರೇ, ನಿಮ್ಮ ಭಾಷಣಕ್ಕೆ ಹೀಗೆ ಆಯಿತಲ್ಲಾ. ನೀವು ಔಟ್ ಡೇಟೆಡ್ ಆದಿರಿ ಎಂದು. ಸರ್ಕುಲೇಷನ್‌ನಲ್ಲಿ ಇದ್ದೀರಿ. ಹೊಸ ಬ್ಲಡ್ ಬಂದಿದೆಯಲ್ಲಾ. ಚರ್ಚೆಯನ್ನು ಪ್ರಾರಂಭಮಾಡಿಸೋಣವೇ ಅಥವಾ ಕೆಇಬಿ ರೆಸಲ್ಯೂಷನ್ ಇದೆ. ಅದನ್ನು ತೆಗೆದುಕೊಂಡು ಬಿಡೋಣವೇ? ಅಷ್ಟು ಹೊತ್ತಿಗೆ ಸ್ವಲ್ಪ ಹೀಟ್ ಜನರೇಟ್ ಆಗುತ್ತದೆ. ಕೆ.ಇ.ಬಿ ವಿಚಾರ ಚರ್ಚೆ ಮಾಡಬೇಕಾ?